# ಮಧುಪ್ರಿಯ ಖಗರತ್ನ



**ಹೂತೋಟಗಳಲ್ಲಿ ಲವಲವಿಕೆಯಿಂದ ಹಾರಾಡುತ್ತಾ ಮಕರಂದಕ್ಕಾಗಿ ಹಾತೊರೆಯುವ ಈ ಹಕ್ಕಿಗಳಿಗೆ ಹೂಗಳ ಮಧುವೇ ಆಹಾರ. ಹೂಗಳ ಆಕಾರಕ್ಕೆ ತಕ್ಕಂತೆ ಇವುಗಳ ಕೊಕ್ಕು ನಿರ್ಮಿತವಾಗಿರುವುದು ಸೃಷ್ಟಿಯ ಸೋಜಿಗವಲ್ಲದೆ ಮತ್ತೇನು?**

■ **ಎಸ್. ಶಿಶುಪಾಲ**






ಹಕ್ಕಿಗಳು ಆಹಾರಕ್ಕಾಗಿ ವಿವಿಧ ಮೂಲಗಳನ್ನು ಬಳಸುತ್ತವೆ. ಕೆಲವು ಹಕ್ಕಿಗಳು ಸಸ್ಯಾಹಾರಿಗಳು. ಮತ್ತೂ ಕೆಲವು ಮಾಂಸಾಹಾರಿಗಳು. ಬಹುತೇಕ ಹಕ್ಕಿಗಳು ಮಿಶ್ರಾಹಾರಿಗಳು. ಆದರೆ ಇಲ್ಲೊಂದು ಗುಂಪಿನ ಹಕ್ಕಿಗಳು ಹೂಗಳ ಮಧುವನ್ನು ಅವಲಂಬಿಸಿರುವುದು ಪ್ರಕೃತಿಯ ಸೋಜಿಗಗಳಲ್ಲೊಂದು. ಈ ರೀತಿ ಮಕರಂದವನ್ನು ಆಹಾರವನ್ನಾಗಿ ಬಳಸುವ ಹಕ್ಕಿಗಳನ್ನು ‘ನೆಕ್ಟಾರಿನಿಡೆ’ ಕುಟುಂಬಕ್ಕೆ ಸೇರಿಸಲಾಗಿದೆ.

ಬೆಳಕಿನ ಕಿರಣಗಳಿಗೆ ಮಿರುಗುವ, ಹೆಚ್ಚಿನ ಚಟುವಟಿಕೆಯಿಂದಿರುವ ಹಕ್ಕಿಗಳನ್ನು ಸೂರಕ್ಕಿಗಳು (ಸನ್‌ಬರ್ಡ್‌ಗಳು) ಎನ್ನುವರು. ಇವುಗಳ